ವಿಜ್ಞಾನ ಭವನ ನಿರ್ಮಾಣ

5087 (5375); ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಅ) ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ಬಿ.ಜಿ.ವಿ.ಎಸ್ ಸಂಸ್ಥೆಯು ವಿಜ್ಞಾನಭವನದ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವಿಜ್ಞಾನ ಭವನ ನಿರ್ಮಾಣ ಕಾಮಗಾರಿಗೆ ಸರ್ಕಾರದ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರವು ಅನುದಾನ ನೀಡುವ ಬಗ್ಗೆ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು)?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ರಾಜ್ಯದಲ್ಲಿ ಡೆಂಗೆ ಮತ್ತು ಹೆಚ್1ಎನ್1 ಪ್ರಕರಣಗಳು

5088 (4944); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಪ್ರಸಕ್ತ ವರ್ಷದ ಜನವರಿ ತಿಂಗಳಿಂದ ಇದುವರೆಗೆ, ಬೆಂಗಳೂರು ಮಹಾನಗರದಲ್ಲಿ ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿ ಹೆಚ್1ಎನ್1 ಮತ್ತು ಡೆಂಗೆ ಜ್ವರದ ಎಷ್ಟು ಪ್ರಕರಣಗಳು ವರದಿಯಾಗಿವೆ;

ಆ) ಈ ಸೋಂಕಿನಿಂದ ಮೃತಪಟ್ಟ ರೋಗಿಗಳೇಷ್ಟು;

ಇ) ಈ ರೋಗಗಳನ್ನು ತಡೆಯಲು ಯಾವ ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ;

ಈ) ಸೊಳ್ಳೆಕಾಟ ತಡೆಯಲು ಪರಿಸರ ಸ್ವಚ್ಛವಾಗಿಡಲು, ಸ್ಥಳೀಯ ಸಂಸ್ಥೆಗಳೊಂದಿಗೆ ಚರ್ಚೆ ಮಾಡಿ ಕ್ರಮ ಜರುಗಿಸಲಾಗಿದೆಯೇ; ಈ ರೋಗದ ಚಿಕಿತ್ಸೆಗೆ ಅಗತ್ಯವಾದ ಔಷಧಗಳ ದಾಸ್ತಾನು ಮಾಡಿಕೊಳ್ಳಲಾಗಿದೆಯೇ;

ಉ) ಈ ರೋಗ ಪರೀಕ್ಷೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರಯೋಗಾಲಯಗಳಿವೆ; ಹೊಸದಾಗಿ ಎಲ್ಲೆಲ್ಲಿ ಪ್ರಯೋಗಾಲಯವನ್ನು ತೆರೆಯಲು ಉದ್ದೇಶಿಸಲಾಗಿದೆ?

ಶ್ರೀ ಯು.ಟಿ. ಖಾದರ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪ್ರಸಕ್ತ ವರ್ಷದ ಜನವರಿ ತಿಂಗಳಿಂದ 20.11.2015ರವರೆಗೆ ಬೆಂಗಳೂರು ಮಹಾನಗರದಲ್ಲಿ ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿ ವರದಿಯಾಗಿರುವ ಹೆಚ್1ಎನ್1 ಮತ್ತು ಡೆಂಗಿ ಜ್ವರದ ಪ್ರಕರಣಗಳ ವರದಿಯನ್ನು **ಅನುಬಂಧ (1)** ರಲ್ಲಿ ನೀಡಲಾಗಿದೆ.

ಆ) ಜನವರಿ 2015 ರಿಂದ 20.11.2015 ರವರೆಗೆ ರಾಜ್ಯದಲ್ಲಿ 9 ಜನರು ಡೆಂಗಿ ಜ್ವರದಿಂದ ಹಾಗೂ ಜನವರಿ 2015 ರಿಂದ ದಿ:21-11-2015 ವರೆಗೆ ಹೆಚ್1ಎನ್1 ನಿಂದ 91 ಜನರು ಮೃತಪಟ್ಟಿರುತ್ತಾರೆ.

ಇ) ರಾಜ್ಯದಲ್ಲಿ ಈ ರೋಗಗಳನ್ನು ತಡೆಯಲು ತೆಗೆದುಕೊಂಡ ಕ್ರಮಗಳನ್ನು **ಅನುಬಂಧ (2)**ರಲ್ಲಿ ನೀಡಲಾಗಿದೆ.

ಈ) ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಲು ಪರಿಸರವನ್ನು ಸ್ವಚ್ಛವಾಗಿಡಲು ಹಾಗೂ ಸೊಳ್ಳೆ ಉತ್ಪತ್ತಿ ತಾಣಗಳನ್ನು ಗುರ್ತಿಸಿ, ಲಾರ್ವಾ(ಸೊಳ್ಳೆಯ ಮರಿ) ನಿರ್ಮೂಲನೆ ಕಾರ್ಯಕ್ರಮವನ್ನು ಆದ್ಯತೆಯಲ್ಲಿ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ಸಭೆಯಲ್ಲಿ ಚರ್ಚಿಸಿ, ಸೂಕ್ತ ಸಲಹೆ ಸೂಚನೆಯನ್ನು ನೀಡಲಾಗಿದೆ. ಜಿಲ್ಲಾ ಹಾಗೂ

ತಾಲ್ಲೂಕು ಕೇಂದ್ರಗಳಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರ ಸೇವೆಗಳನ್ನು ಪಡೆದು, ಮನೆಮನೆಗೆ ಭೇಟಿ ನೀಡಿ, ಲಾರ್ವಾ ನಿರ್ಮೂಲನೆ ಕಾರ್ಯವನ್ನು ಹಾಗೂ ಆರೋಗ್ಯ ಶಿಕ್ಷಣವನ್ನು ಸಮುದಾಯಕ್ಕೆ ನೀಡಲಾಗುತ್ತಿದೆ.

ಡೆಂಗಿ ಜ್ವರಕ್ಕೆ ನಿರ್ದಿಷ್ಟವಾದ ಚಿಕಿತ್ಸೆ ಇರುವುದಿಲ್ಲ, ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಲು ಅಗತ್ಯವಿರುವ ಔಷಧಿಗಳ ದಾಸ್ತಾನು ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುತ್ತದೆ.

ಊ) ಬೆಂಗಳೂರು ನಿಮ್ಹಾನ್ಸ್, ನಾರಾಯಣ ನೇತ್ರಾಲಯ, ಮಣಿಪಾಲ್ ಆಸ್ಪತ್ರೆ ಬೆಂಗಳೂರು, ಕಮಾಂಡ್ ಆಸ್ಪತ್ರೆ ಬೆಂಗಳೂರು ಮತ್ತು ಉಡುಪಿಯ ಮಣಿಪಾಲ್ ಆಸ್ಪತ್ರೆಯ ಪರೀಕ್ಷಾ ಕೇಂದ್ರಗಳಲ್ಲಿ ಹೆಚ್1ಎನ್1 ಮಾದರಿಗಳ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಇದಲ್ಲದೆ ಮಾದರಿಗಳ ಶೀಘ್ರ ಪರೀಕ್ಷೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೆಚ್ಚುವರಿಯಾಗಿ ದಕ್ಷಿಣ ಕನ್ನಡ, ಹುಬ್ಬಳ್ಳಿ, ಬಳ್ಳಾರಿ, ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಮಾದರಿಗಳ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಡೆಂಗ್ಯೂ ಜ್ವರ ಪರೀಕ್ಷೆಯ ಪ್ರಯೋಗಾಲಯಗಳ ವಿವರವನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ಅನುಬಂಧ–1

ಪ್ರ.ಸಂ: 4944

DISTRICT WISE DENGUE & H1N1 INCIDENCE			
SL NO	DISTRICT NAME	DENGUE CASES (As on 20.11.2015	H1N1 CASES (As On 21-11-2015)
1	Bangaluru (U)	292	586
2	Bangaluru (R)	50	27
3	Ramanagar	69	37
4	Kolar	175	41
5	Chikkaballapura	104	22
6	Tumakuru	147	140
7	Chitradurga	222	62
8	Davanagere	168	62
9	Shivamogga	99	44
10	Belagavi	24	33
11	Vijayapura	21	52
12	Bagalkote	49	43
13	Dharwada	44	31
14	Gadag	40	12
15	Haveri	136	15
16	Uttara kannada	55	29
17	Kalaburagi	27	57
18	Yadageri	5	6
19	Bidar	16	26
20	Ballari	216	19
21	Raichur	124	20
22	Koppal	54	8
23	Mysuru	263	135
24	Chamarajanagar	30	25
25	Mandya	80	74
26	Hassan	81	30
27	Dakshina Kannada	349	161
28	Udupi	168	164
29	Chikkamagaluru	76	29
30	Kodagu	83	28
	Bangalore City(BBMP)	1249	1524
	Total	4516	3542

ಅನುಬಂಧ–2

ರಾಜ್ಯದಲ್ಲಿ ಡೆಂಗಿ ಜ್ವರದ ನಿಯಂತ್ರಣಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳು

1. ಡೆಂಗಿ & ಚಿಕುಂಗುನ್ಯಾ ಈ ರೋಗಗಳ ಶೀರ್ಷ ಪತ್ತೆಗಾಗಿ ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತೆಯರ ಮುಖಾಂತರ ಮನೆಮನೆಗೆ ಭೇಟಿ ನೀಡುವ ಮೂಲಕ ಜ್ವರ ಸಮೀಕ್ಷಾ ಕಾರ್ಯವನ್ನು ಮಾಡಲಾಗುತ್ತಿದೆ.

2. ಡೆಂಗ್ಯು ಮತ್ತು ಚಿಕುಂಗುನ್ಯ ನಿಯಂತ್ರಣದಲ್ಲಿ ಈಡಿಸ್ ಲಾರ್ವಾ ಸಮೀಕ್ಷೆ ಮತ್ತು ನಿರ್ಮೂಲನಾ ಚಟುವಟಿಕೆಯೇ ಪ್ರಧಾನವಾಗಿದ್ದು, ಈ ಚಟುವಟಿಕೆಯನ್ನು ಆದ್ಯತೆಯ ಮೇರೆಗೆ ಎಲ್ಲಾ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಕೈಗೊಳ್ಳಲಾಗುತ್ತಿದೆ.

3. ಯಾವುದಾದರೂ ವ್ಯಕ್ತಿಯಲ್ಲಿ ಜ್ವರ ಕಂಡುಬಂದಲ್ಲಿ ರೋಗಲಕ್ಷಣಗಳಿಗನುಗುಣವಾಗಿ ರಕ್ತ ಲೇಪನ ಇಲ್ಲವೇ ರಕ್ತ ಮಾದರಿಯನ್ನು ಸಂಗ್ರಹಿಸಿ, ಪತ್ತೆಗಾಗಿ ಪ್ರಯೋಗಾಲಯಗಳಿಗೆ ಕಳುಹಿಸಲಾಗುತ್ತಿದೆ.

4. ಡೆಂಗಿ ಮತ್ತು ಚಿಕುಂಗುನ್ಯಾ ಪತ್ತೆಗಾಗಿ ಬೇಕಾದ ELISA ಆಧಾರಿತ ಕಿಟ್ಟುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಎಲ್ಲಾ ಪ್ರಯೋಗಾಲಯಗಳಿಗೆ ಸರಬರಾಜು ಮಾಡಲಾಗುತ್ತಿದೆ.

5. ಡೆಂಗಿ & ಚಿಂಕುಗುನ್ಯ ಪತ್ತೆಗಾಗಿ 29 ಪ್ರಯೋಗಾಲಯಗಳನ್ನು ರಾಜ್ಯಾದ್ಯಂತ ತೆರೆಯಲಾಗಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲದೆ ಖಾಸಗಿ ಆಸ್ಪತ್ರೆಗಳಿಂದಲೂ ಸಹ ರಕ್ತ ಮಾದರಿಗಳನ್ನು ಸ್ವೀಕರಿಸಿ ಉಚಿತವಾಗಿ ಪರೀಕ್ಷಿಸಲಾಗುತ್ತದೆ.

6. ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.

7. ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಡೆಂಗಿ ಮತ್ತು ಚಿಕುಂಗುನ್ಯಾ ರೋಗಿಗಳ ಚಿಕಿತ್ಸೆ ಮತ್ತು ನಿರ್ವಹಣೆಗೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಅವಶ್ಯ ತರಭೇತಿ ನೀಡಿ ಪ್ರಾಥಮಿಕ ಹಂತದ ಡೆಂಗಿ ರೋಗಿಗಳನ್ನು ಚಿಕಿತ್ಸೆ ಮಾಡಲು ವ್ಯವಸ್ಥೆ ಮಾಡಲಾಗಿದೆ ಹಾಗೂ ಜಟಿಲ ಡೆಂಗಿ ರೋಗಿಗಳನ್ನು ತಡಮಾಡದೆ ಆದಷ್ಟೂ ಬೇಗ ಹೆಚ್ಚಿನ ಚಿಕಿತ್ಸೆಗೆ ಹತ್ತಿರದ ಮೇಲ್ದರ್ಜೆ ಆಸ್ಪತ್ರೆಗೆ ರವಾನಿಸುವಂತೆ ಸೂಚಿಸಲಾಗಿದೆ.

8. ಲಾರ್ವಾನಾಶಕ ಮತ್ತು ಧೂಮೀಕರಣ ಕೀಟನಾಶಕಗಳನ್ನು ಜಿಲ್ಲೆಗಳಿಗೆ ಸರಬರಾಜು ಮಾಡಲಾಗಿದ್ದು, ಡೆಂಗಿ ಹರಡಲು ಕಾರಣವಾದ ಈಡಿಸ್ ಸೊಳ್ಳೆಗಳ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

9. ಮಾಹೆವಾರು ಕೈಗೊಳ್ಳಬೇಕಾದ ಚಟುವಟಿಕೆಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಎಲ್ಲಾ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಿಗೆ ಕಳುಹಿಸಿ ಜಿಲ್ಲಾ ಮಟ್ಟದಿಂದ ಗ್ರಾಮ ಮಟ್ಟದವರೆಗೆ ಎಲ್ಲಾ ಹಂತದಲ್ಲಿಯೂ ಈ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

10. ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಅರೆಸರ್ಕಾರಿ ಪತ್ರಗಳನ್ನು ಬರೆದಿದ್ದು, ಡೆಂಗಿ & ಚಿಕುಂಗುನ್ಯ ನಿಯಂತ್ರಣದಲ್ಲಿ ಸದರಿ ಇಲಾಖೆಗಳ ಪಾತ್ರವನ್ನು ಸೂಚಿಸುತ್ತಾ ಅದರಂತೆ ಇವುಗಳ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಕೋರಲಾಗಿದೆ.

11. ರಾಜ್ಯ ಮಟ್ಟದಲ್ಲಿ "ಮರಣ ತಪಾಸಣಾ ಸಮಿತಿ (Dengue Death Audit Committee)" ಯನ್ನು ರಚಿಸಲಾಗಿದ್ದು, ಈ ಸಮಿತಿಯು ಡೆಂಗಿ ರೋಗದಿಂದ ಸಂಭವಿಸಿರಬಹುದಾದ ಎಲ್ಲಾ ಮರಣ ಪ್ರಕರಣಗಳ ಸೂಕ್ತ ತಪಾಸಣೆ ನಡೆಸಿ ದೃಢೀಕರಿಸಲಾಗುತ್ತಿದೆ.

12. ಶಾಲೆಗಳಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಡೆಂಗಿಜ್ವರ ನಿಯಂತ್ರಣ ವಿಷಯವನ್ನು ವಿಶೇಷವಾಗಿ ಪ್ರಸ್ತಾಪಿಸಿ, ಶಾಲೆಗಳ ಮುಖಾಂತರ ಸಮುದಾಯದಲ್ಲಿ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

13. ಜುಲೈ ಮಾಹೆಯನ್ನು ಡೆಂಗಿ ವಿರೋಧಿ ಮಾಸ ಎಂದು ಆಚರಿಸಿ, ಈ ಸಂದರ್ಭದಲ್ಲಿ ನೀರಿನ ಶೇಖರಣಾ ವಿಧಾನ, ಘನ ತ್ಯಾಜ್ಯದ ವಿಲೇವಾರಿ, ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟುವ ವಿಧಾನ ಇವುಗಳ ಬಗ್ಗೆ ವ್ಯಾಪಕ ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಯಿತು.

14. 2015–16ನೇ ಸಾಲಿನಲ್ಲಿ ಡೆಂಗಿ ಮತ್ತು ಚಿಕುಂಗುನ್ಯಾ ನಿಯಂತ್ರಣಕ್ಕಾಗಿ ರೂ.216.00 ಲಕ್ಷಗಳ ಅನುಧಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

15. 2015–16ನೇ ಸಾಲಿನಲ್ಲಿ ಇದುವರೆಗೆ ಒಟ್ಟು ರೂ.10.14ಲಕ್ಷಗಳನ್ನು ಡೆಂಗಿ ಜ್ವರ ಪತ್ತೆಹಚ್ಚಲು NS1 ಕಿಟ್‌ಗಳ ಖರೀದಿಗೆ ಎಲ್ಲಾ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಹಾಗೂ ರೂ.2.00ಲಕ್ಷಗಳ ವೆಚ್ಚದಲ್ಲಿ ಡೆಂಗಿಜ್ವರ ಜಾಗೃತಿಗಾಗಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದು, ದಿನಾಂಕ:23–3–2015ರಂದು ಪ್ರಜಾವಾಣಿ, ದಿನಾಂಕ:25–3–2015ರಂದು ವಿಜಯ ಕರ್ನಾಟಕ, ದಿನಾಂಕ:27–3–2015 ರಂದು ಸಂಯುಕ್ತ ಕರ್ನಾಟಕ ಮತ್ತು ದಿನಾಂಕ:29–3–2015ರಂದು ಕನ್ನಡ ಪ್ರಭಾ ಪತ್ರಿಕೆಗಳ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ.

16. ಜುಲೈ–2015ರಲ್ಲಿ ರಾಜ್ಯಾದ್ಯಂತ ಡೆಂಗಿ ನಿಯಂತ್ರಣ ಮಾಸಾಚರಣೆಯನ್ನು ಆಚರಿಸಲು ಮತ್ತು ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.

17. ದಿನಾಂಕ: 7–4–2015ರಂದು ಮಾನ್ಯ ಆರೋಗ್ಯ ಮತ್ತು ಕು.ಕ.ಸಚಿವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮತ್ತು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಸಭೆಯನ್ನು ಕರೆದು ಡೆಂಗಿ ಜ್ವರದ ನಿಯಂತ್ರಣದ ಬಗ್ಗೆ ಚರ್ಚಿಸಲಾಗಿದೆ.

18. ದಿನಾಂಕ: 13–5–15ರಂದು ಮಾನ್ಯ ಆರೋಗ್ಯ ಮತ್ತು ಕು.ಕ.ಸಚಿವರ ಆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ನಡೆಸಲಾಯಿತು.

19. ದಿನಾಂಕ:19–5–15ರಂದು ನಿರ್ದೇಶಕರು, ಆರೋಗ್ಯ ಮತ್ತು ಕು.ಕ.ಸೇವೆಗಳ ಅಧ್ಯಕ್ಷತೆಯಲ್ಲಿ ಬ್ಲಡ್‌ಬ್ಯಾಂಕ್, Karnataka State Aids Prevention Sociaty ಉಪ ನಿರ್ದೇಶಕರು ಹಾಗೂ ಹೆಚ್ಚುವರಿ ನಿರ್ದೇಶಕರು ಡ್ರಗ್ ಕಂಟ್ರೋಲ್ ಆಫೀಸ್ ಇವರೊಡನೆ ಡೆಂಗಿ ನಿಯಂತ್ರಣ ಹಾಗೂ ಪ್ಲೇಟ್‌ಲೆಟ್‌ಗಳ ದಾಸ್ತಾನುಗಳ ಬಗ್ಗೆ ಚರ್ಚಿಸಲಾಗಿದೆ.

20. ದಿನಾಂಕ:16–06–2015 ಹಾಗೂ ದಿನಾಂಕ:06–07–2015 ರಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಸಭೆಯನ್ನು ರಾಜ್ಯಮಟ್ಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕರೆದಿದ್ದು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲಾಯಿತು.

21. ದಿನಾಂಕ:10 & 11–09–2015 ರಂದು ರಾಜ್ಯ ಮಟ್ಟದ ಡೆಂಗಿ ಮತ್ತು ಚಿಕುಂಗುನ್ಯಾ ರೋಗದ ಪರಿಶೀಲನಾ ಸಭೆಯನ್ನು ನಡೆಸಲಾಯಿತು.

22. ದಿನಾಂಕ:16.09.2015ರಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಡೆಂಗಿ ಮತ್ತು ಚಿಕುಂಗುನ್ಯಾ ರೋಗದ ನಿಯಂತ್ರಣದ ಬಗ್ಗೆ ಪರಿಶೀಲನಾ ಸಭೆ ಕರೆದು ಸೂಕ್ತ ಸಲಹೆ ಸೂಚನೆಯನ್ನು ನೀಡಲಾಯಿತು.

ರಾಜ್ಯದಲ್ಲಿ ಹೆಚ್1 ಎನ್1 ಸೋಂಕು ನಿಯಂತ್ರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳ ವಿವರಗಳು ಹೀಗಿವೆ:

- ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ಪ್ರತ್ಯೇಕ ವಾರ್ಡನ್ನು ಗುರುತಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲು ಬೆಂಗಳೂರಿನ ಖಾಸಗಿ ಆಸ್ಪತ್ರೆ ಹಾಗೂ ವೈದ್ಯಕೀಯ ಶಿಕ್ಷಣ ಆಸ್ಪತ್ರೆಗಳಲ್ಲಿ ಶಂಕಿತ ರೋಗಿಗಳನ್ನು ಪ್ರತ್ಯೇಕಿಸಿ ಪರೀಕ್ಷಿಸಿ ಹೆಚ್1ಎನ್1 ಸೋಂಕಿತ ರೋಗಿಗಳಿಗೆ ಚಿಕಿತ್ಸೆ ನೀಡಲು ಏರ್ಪಾಡು ಮಾಡಲಾಗಿದೆ.
- ರಾಜ್ಯದಲ್ಲಿ ಬೆಂಗಳೂರಿನ ನಿಮ್ಹಾನ್ಸ್, ನಾರಾಯಣ ನೇತ್ರಾಲಯ, ಮಣಿಪಾಲ್ ಆಸ್ಪತ್ರೆ ಬೆಂಗಳೂರು, ಕಮಾಂಡ್ ಆಸ್ಪತ್ರೆ ಬೆಂಗಳೂರು ಮತ್ತು ಉಡುಪಿಯ ಮಣಿಪಾಲ್ ಆಸ್ಪತ್ರೆಯ ಪರೀಕ್ಷಾ ಕೇಂದ್ರಗಳಲ್ಲಿ ಮಾದರಿಗಳ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

ಸಾರ್ವಜನಿಕರ ತಿಳುವಳಿಕೆಗಾಗಿ: ಏನು ಮಾಡಬೇಕು

- ಸೋಂಕು ಪೀಡಿತರ ಸಂಪರ್ಕದಿಂದ ದೂರವಿರುವುದು, ಶಂಕಿತ ರೋಗಿಯು ಮನೆಯಲ್ಲಿಯೇ ಪ್ರತ್ಯೇಕವಾಗಿರುವುದು.
- ವೈಯ್ಯಕ್ತಿಕ ಸ್ವಚ್ಚತೆ ಕಾಪಾಡಿಕೊಳ್ಳುವುದು. ವಿಶೇಷವಾಗಿ ಆಗಾಗ್ಗೆ ಸಾಬೂನಿನಿಂದ ಕೈ ತೊಳೆದುಕೊಳ್ಳುವುದು.
- ಕೆಮ್ಮುವಾಗ ಮತ್ತು ಸೀನುವಾಗ ಮಾಸ್ಕ್/ಕೈವಸ್ತ್ರ ಉಪಯೋಗಿಸುವುದು. ಉಸಿರಾಟದ ತೊಂದರೆಯಾದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆಯುವುದು
- ಪೌಷ್ಟಿಕ ಆಹಾರಗಳನ್ನು ಉಪಯೋಗಿಸುವುದು, ಚೆನ್ನಾಗಿ ನಿದ್ದೆ ಮಾಡುವುದು, ಒತ್ತಡಗಳನ್ನು ನಿಭಾಯಿಸುವುದು

ಏನು ಮಾಡಬಾರದು

- ಸೋಂಕಿತರ ಕೈ ಕುಲುಕುವುದು, ಚುಂಬಿಸುವವುದು ಮತ್ತು ಆಲಂಗಿಸಿಕೊಳ್ಳುವುದನ್ನು ಮಾಡಬಾರದು.
- ತಜ್ಞ ವೈದ್ಯರ ಸಲಹೆ ಇಲ್ಲದೆ ಔಷಧೋಪಚಾರ ಮಾಡಬಾರದು.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು.
- ಆಸ್ಪಿರಿನ್ ಮಾತ್ರೆಗಳನ್ನು ಮಕ್ಕಳಿಗೆ ನೀಡಬಾರದು.

ಇಲಾಖೆಯು ತೆಗೆದುಕೊಂಡ ಕ್ರಮಗಳು:

- ಹೆಚ್ಚಾಗಿ ಶ್ವಾಸಕೋಶದ ಸೋಂಕು ಕಾಣಿಸಿಕೊಂಡು ನೆಗಡಿ, ಕೆಮ್ಮು ಜ್ವರದ ಜೊತೆಗೆ ಉಸಿರಾಟದ ತೊಂದರೆಯಿಂದ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾದವರನ್ನು ಪರೀಕ್ಷಿಸಿದಾಗ ಹೆಚ್1ಎನ್1 ಸೋಂಕು ಕಂಡುಬಂದಲ್ಲಿ ಪ್ರತ್ಯೇಕ ವಿಭಾಗದಲ್ಲಿ ರೋಗಿಗಳನ್ನು ಪರೀಕ್ಷಿಸಿ, ಸರ್ಕಾರದ ಮಾರ್ಗಸೂಚಿಯಂತೆ ಶಂಕಿತ ರೋಗಿಗಳಿಗೆ ಚಿಕಿತ್ಸೆಗೊಳಪಡಿಸಲಾಗುತ್ತಿದೆ.
- ಕ್ಷೇತ್ರಮಟ್ಟದಲ್ಲಿ ಆರೋಗ್ಯ ಮತ್ತು ಆಶಾ ಕಾರ್ಯಕರ್ತರುಗಳಿಂದ ಇನ್ಫ್ಲೂಯೆಂಜಾ ಲೈಕ್‌ಇಲ್ನೆಸ್ (ILI) Clusters ಬಗ್ಗೆ ಸಕ್ರಿಯ ಸಮೀಕ್ಷೆ ನಡೆಸಿ ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.
- ಟಾಮಿಫ್ಲೂ ಮಾತ್ರೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಜಿಲ್ಲೆಯಲ್ಲಿ ದಾಸ್ತಾನು ಇಟ್ಟಿದ್ದು ಹಾಗೂ 'ಬಿ' ಮತ್ತು 'ಸಿ' ವರ್ಗದ ರೋಗಿಗಳಿಗೆ 36 ಗಂಟೆಯೊಳಗಾಗಿ ಟಾಮಿಫ್ಲೂ ಮಾತ್ರೆಗಳನ್ನು ನೀಡುವ ಏರ್ಪಾಡು ಮಾಡಲಾಗಿದೆ. 'ಎ' ವರ್ಗೀಕರಣದಲ್ಲಿರುವ ರೋಗಿಗಳನ್ನು ಅನುಸರಣೆ ಮಾಡಲಾಗುತ್ತಿದೆ.

- ಹೆಚ್1ಎನ್1 ರೋಗದ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸಲು, ಭಿತ್ತಿಪತ್ರ, ಕರಪತ್ರ, ಟಿ.ವಿ.ಸ್ಪಾಟ್ಸ್‌ಗಳನ್ನು ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಹಾಗೂ ಪತ್ರಿಕಾ ಮಾಧ್ಯಮಗಳಲ್ಲಿ ಪ್ರಚಾರ ಮಾಡಲಾಗುತ್ತಿದೆ.

- ಸಾಕಷ್ಟು ಪ್ರಮಾಣದ ಟಾಮಿಫ್ಲೂ ಮಾತ್ರೆ ಮತ್ತು ಸಿರಪ್‌ಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ದಾಸ್ತಾನು ಇಡಲು ಎಲ್ಲಾ ಜಿಲ್ಲೆಗಳಿಗೆ 1 ಲಕ್ಷ ರೂಗಳ ಅನುದಾನವನ್ನು ನೀಡಲಾಗಿದೆ.

- ಹೆಚ್ಚಿನ ಔಷಧಿಗಳ ಅವಶ್ಯಕತೆ ಕಂಡುಬಂದಲ್ಲಿ ಮುಂಜಾಗ್ರತ ಕ್ರಮವಾಗಿ ರಾಜ್ಯ ಮಟ್ಟಕ್ಕೆ ಬೇಡಿಕೆ ಸಲ್ಲಿಸಿ ಔಷಧಿಗಳನ್ನು ಪಡೆಯಲು ಸೂಕ್ತ ನಿರ್ದೇಶನ ನೀಡಲಾಗಿದೆ.

- ರಾಜ್ಯದಲ್ಲಿನ ಖಾಸಗಿ ಔಷಧಿ ಅಂಗಡಿಗಳಲ್ಲಿ ಟಾಮಿಫ್ಲೂ ಮಾತ್ರೆಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಲು ಅನುಮತಿಸಲಾಗಿದೆ.

- ದಿನಾಂಕ:29–10–2015 ರಂದು ರಾಜ್ಯ ಮಟ್ಟದಲ್ಲಿ ಮಾನ್ಯ ಆರೋಗ್ಯ ಸಚಿವರು ಮತ್ತು ಮಾನ್ಯ ಪ್ರಧಾನ ಕಾರ್ಯದರ್ಶಿಯವರು, ಆಯುಕ್ತರು ಹಾಗೂ ನಿರ್ದೇಶಕರ ಸಮ್ಮುಖದಲ್ಲಿ ವೀಡಿಯೋ ಕಾನ್ಫರೆನ್ಸ್ ಸಭೆ ಕರೆಯಲಾಗಿತ್ತು. ಈ ಸಂದರ್ಭದಲ್ಲಿ ರಾಜ್ಯ ವ್ಯಾಪಿ ಹೆಚ್1ಎನ್1, ಕಾಯಿಲೆಯ ಸೊಂಕು ಉಲ್ಬಣಗೊಳ್ಳದಂತೆ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ, ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಲಾಗಿದೆ.

ಅನುಬಂಧ–3

Sl. No.	Name of the SSL	Functional / Non-Functional
1	VIMS, Bellary	Functional
2	PHI Bangalore	Functional
3	VDL Shimoga	Functional
4	DSU, DK	Functional
5	DSU, Belgaum	Functional
6	DSU, Kolar	Functional
7	IGICH, B'lore	Functional
8	NCDC, B'lore	Functional
9	KIMS Hubli	Functional
10	DSU, Hassan	Functional
11	DSU, CTDRG	Functional
12	DSU, Raichur	Functional
13	DSU, Tumkur	Functional
14	DSU, Bidar	Functional
15	DSU, Mysore	Functional
16	CG Hosp, DVG	Functional
17	MCVR, Manipal	Functional
18	NIV, Bangalore	Functional
19	DSU, Bijapur	Functional
20	DSU Bagalkote	Functional
21	DSU, Gulbarga	Functional
22	DSU, Chamrajanagar	Functional
23	DSU, Chikmagalur	Functional
24	DSU, Gadag	Functional
25	DSU, Haveri	Functional
26	DSU, Kodagu	Functional
27	DSU, Koppal	Functional
28	DSU, Mandya	Functional
29	DSU, UK	Functional
30	DSU, Ramanagara	Functional
31	DSU, Chikballapura	Functional
32	DSU, Yadgir	Installation under process
33	NIMHANS	Functional
	Total	32 Functional and One Installation under process